**ಪ್ರಮಾಣೀಕರಿಸಲಾದ ದಿನಾಂಕಃ– 09.07.2026.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ. ಜಿ. ಎ ವಕೀಲರಿಂದಃ–**

ಲೋನ್ ಅರ್ಜಿಯಲ್ಲಿ 10 ಜನರ ಹೆಸರುಗಳು ಇದೆ. ನಿ ಪಿ 8 ರಲ್ಲೂ 10 ಜನರ ಸಹಿಗಳಿದೆ. ನಿ ಪಿ 8 ರಲ್ಲಿ ಸಾಕ್ಷಿದಾರನ ಸಹಿಗಳಿಲ್ಲ ಎಂದರೆ ಸರಿ. ನಿ ಪಿ 9 ದಾಖಲೆಯು 10 ಜನರು ಒಟ್ಟಾಗಿ ಸಂಘ ಮಾಡಿ ಸಾಲ ಪಡೆಯಬಹುದು ಎಂದು ಇರುತ್ತದೆ. 10 ಜನರ ಸದಸ್ಯರಿರುವ ಸಂಘ ಸಾಲ ಪಡೆದು ಮರುಪಾವತಿಸದಿದ್ದಾಗ ಕೇವಲ ಪ್ರತಿನಿದಿಗಳಿಂದ ವಸೂಲಿ ಮಾಡಬೇಕೆಂದು ನಿ ಪಿ 10 ಬೈಲದಲ್ಲಿ ಇಲ್ಲ. ನಮ್ಮ ಸೊಸೈಟಿಯು ಈ ಸಂಘದ ಎಲ್ಲ ಸದಸ್ಯರಿಂದ ವಸೂಲಿ ಮಾಡುವ ಮೊದಲೇಚೆಕ್‌ಗಳನ್ನು ಪಡೆದಿದ್ದೆವು ಎಂದರೆ ಸರಿಯಲ್ಲ, ಯಾರಿಂದಲೂ ಚೆಕ್ ಅನ್ನು ಪಡೆದಿರಲಿಲ್ಲ, ವಸೂಲಿಗೆ ಹೋದಾಗ ಆರೋಪಿ ಕೊಟ್ಟಿರುತ್ತಾನೆ. ಆರೋಪಿಯಿಂದ ನಾವು ಬಲವಂತವಾಗಿ ಚೆಕ್ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸಂಘದ ಹೆಸರಿನಲ್ಲಿ ಒಂದು ಖಾತೆ ತೆರೆದಿದ್ದು, ಆ ಖಾತೆಗೆ ನಮ್ಮ ಸೊಸೈಟಿಯಲ್ಲಿರುವ ಅವರ ಖಾತೆಗೆ ಹಾಕಿರುತ್ತೇವೆ.

ಆರೋಪಿ ಹೆಸರಿನಲ್ಲಿ ಈ ಸಂಘದ ಖಾತೆಯ ಚೆಕ್ ಬುಕ್ ಇದ್ದು ಇವರು ಮತ್ತು ಇನ್ನೊಬ್ಬ ಪ್ರತಿನಿಧಿ ಚೆಕ್ ವ್ಯವಹಾರಕ್ಕೆ authorized signatory ಆಗಿದ್ದು ಅವರಿಬ್ಬರು ರೂ. 50 ಸಾವಿರದಂತೆ ಹಣವನ್ನು ತೆಗೆದು ಪ್ರತಿಯೊಬ್ಬ ಸದಸ್ಯರಿಗೂ ಕೊಟ್ಟಿರುತ್ತಾರೆ. ಸಾಲದ ಅರ್ಜಿಯಲ್ಲಿ ಮತ್ತು ಕರಾರಿನಲ್ಲಿ ಎಲ್ಲ ಸದಸ್ಯರ ಸಹಿಗಳು ಇರುವುದರಿಂದ ಸೊಸೈಟಿಯು ಕೇವಲ ಪ್ರತಿನಿಧಿಗಳಿಂದ ಹಣ ವಸೂಲಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.  ಬೈಲದಂತೆ ನಾವು ನಡೆದುಕೊಳ್ಳಬೇಕು ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/–

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ